# ಹಬ್ಬದ ಸೀಸನ್ ಗೆ ಫ್ಲಿಪ್ ಕಾರ್ಟ್ ನಿಂದ ಪೂರೈಕೆ ಜಾಲ ಬಲವರ್ಧನೆ

**- ಅಸ್ಸಾಂನಿಂದ ಗುಜರಾತ್ ಮತ್ತು ಕರ್ನಾಟಕದಿಂದ ಹರ್ಯಾಣದವರೆಗೆ ವಿಸ್ತರಣೆ**

**- ದೇಶಾದ್ಯಂತ ಹೊಸದಾಗಿ 66 ಫುಲ್ ಫಿಲ್ಮೆಂಟ್ ಮತ್ತು ವಿಂಗಡಣೆ ಕೇಂದ್ರಗಳ ಆರಂಭ**

**- 10 ಮಿಲಿಯನ್ ಚದರಡಿಗೂ ಅಧಿಕ ಪ್ರದೇಶ ಮತ್ತು 20 ಮಿಲಿಯನ್ ಕ್ಯೂಬಿಕ್ ಫೀಟ್ ಸ್ಟೋರೇಜ್ ಸ್ಥಳ**

**- 1000 ಕ್ಕೂ ಅಧಿಕ ಡೆಲಿವರಿ ಹಬ್ ಗಳ ಸೇರ್ಪಡೆ. ಇದರಿಂದ ಕಿರಾಣಗಳ ಜತೆಗಿನ ಪಾಲುದಾರಿಕೆ ಮೂಲಕ ಕಟ್ಟಕಡೆಯ ಗ್ರಾಹಕರಿಗೂ ವೇಗವಾಗಿ ಉತ್ಪನ್ನಗಳ ವಿತರಣೆ**

**- ಹೆಚ್ಚುವರಿಯಾಗಿ 1,15,000 ಕಾಲೋಚಿತ ಉದ್ಯೋಗ ಸೃಷ್ಟಿ**

ಬೆಂಗಳೂರು, ಸೆಪ್ಟೆಂಬರ್ 15, 2021: ಭಾರತದ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಬರುವ ಹಬ್ಬದ ಸೀಸನ್ ಗಾಗಿ ದೇಶಾದ್ಯಂತ ತನ್ನ ಪೂರೈಕೆ ಜಾಲವನ್ನು ವಿಸ್ತರಣೆ ಮಾಡುವುದರೊಂದಿಗೆ ಬಲವರ್ಧನೆಗೊಳಿಸಿದೆ. ಬೆಳೆಯುತ್ತಿರುವ ಮಿಲಿಯನ್ ಗಟ್ಟಲೆ ಆನ್ ಲೈನ್ ಗ್ರಾಹಕರ ಬೇಡಿಕೆಗಳನ್ನು ಪೂರೈಸಲು ಮತ್ತು ಎಂಎಸ್ಎಂಇಗಳು, ಮಾರಾಟಗಾರರು, ಕುಶಲಕರ್ಮಿಗಳು ಮತ್ತು ಕಿರಾಣಗಳಿಗೆ ಬೆಂಬಲ ನೀಡುವ ದೃಷ್ಟಿಯಿಂದ ಫ್ಲಿಪ್ ಕಾರ್ಟ್ ಈ ವಿಸ್ತರಣೆಯನ್ನು ಮಾಡುತ್ತಿದೆ. ಈ ಪ್ರಯತ್ನವಾಗಿ ಫ್ಲಿಪ್ ಕಾರ್ಟ್ ದೇಶಾದ್ಯಂತ ಹೆಚ್ಚುವರಿಯಾಗಿ 66 ಹೊಸ ದೊಡ್ಡಮಟ್ಟದ ಫುಲ್ ಫಿಲ್ಮೆಂಟ್ ಮತ್ತು ವಿಂಗಡಣೆ ಕೇಂದ್ರಗಳನ್ನು ಆರಂಭಿಸಿದೆ. ಅಸ್ಸಾಂ, ಚತ್ತೀಸ್ ಘಡ, ಗುಜರಾತ್, ಕರ್ನಾಟಕ, ಹರ್ಯಾಣ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳದಲ್ಲಿ ಈ ಹೊಸ ಕೇಂದ್ರಗಳನ್ನು ಆರಂಭಿಸಿದೆ.

ಇದರ ಜೊತೆಗೆ ಫ್ಲಿಪ್ ಕಾರ್ಟ್ ಕಟ್ಟಕಡೆಯ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುವ ನಿಟ್ಟಿನಲ್ಲಿ 1000 ಕ್ಕೂ ಹೆಚ್ಚು ಹೊಸ ಡೆಲಿವರಿ ಹಬ್ (ಡಿಎಚ್)ಗಳನ್ನು ಆರಂಭಿಸುವುದರೊಂದಿಗೆ ಡೆಲಿವರಿ ಹಬ್ ವಿಭಾಗವನ್ನು ಶಕ್ತಿಶಾಲಿಯನ್ನಾಗಿ ಮಾಡಿದೆ. ಬಿಗ್ ಬಿಲಿಯನ್ ಡೇಸ್ ನ ಸಂಕೀರ್ಣತೆ ಮತ್ತು ಮಟ್ಟದ ಸಾಮರ್ಥ್ಯಕ್ಕೆ ಹೂಡಿಕೆಗಳು, ಸಂಗ್ರಹಣೆ, ವಿಂಗಡಣೆ, ಪ್ಯಾಕೇಜಿಂಗ್, ಮಾನವ ಸಂಪನ್ಮೂಲ, ತರಬೇತಿ ಮತ್ತು ವಿತರಣೆಯ ಅಗತ್ಯತೆ ಹೆಚ್ಚಾಗಿರುತ್ತದೆ. ಇದು ಹಬ್ಬದ ಸೀಸನ್ ನಲ್ಲಿ ಹೆಚ್ಚುವರಿ ಉದ್ಯೋಗವಕಾಶಗಳನ್ನು ಕಲ್ಪಿಸಲು ನೆರವಾಗುತ್ತದೆ. `ಕಟ್ಟಕಡೆಯ ವಿತರಣೆ ಪಾಲುದಾರಿಕೆ' ಕಾರ್ಯಕ್ರಮದ ಭಾಗವಾಗಿ ಫ್ಲಿಪ್ ಕಾರ್ಟ್ ಕಿರಾಣಗಳ ಪಾಲುದಾರಿಕೆಯನ್ನು ಬಲಪಡಿಸಿಕೊಂಡಿದೆ ಮತ್ತು ಅವುಗಳನ್ನು ತಂತ್ರಜ್ಞಾನ ಚಾಲಿತ ಡಿಜಿಟಲ್ ಪರಿಸರ ವ್ಯವಸ್ಥೆಯ ಭಾಗವನ್ನಾಗಿ ಮಾಡಿದೆ. ಈ

ವರ್ಷ ಫ್ಲಿಪ್ ಕಾರ್ಟ್ 1,15,000 ನೇರ ಕಾಲೋಚಿತ ಉದ್ಯೋಗಗಳನ್ನು ಸೃಷ್ಟಿ ಮಾಡಲಿದ್ದು, ಈ ಪೈಕಿ ಶೇ.15 ರಷ್ಟು ಮಹಿಳೆಯರು ಮತ್ತು ದಿವ್ಯಾಂಗರಿಗೆ ಮೀಸಲಿಡುತ್ತಿದೆ.

ದೇಶದಲ್ಲಿ ಆರ್ಥಿಕ ಸೇರ್ಪಡೆ ಬೆಳವಣಿಗೆಯಲ್ಲಿ ಇ-ಕಾಮರ್ಸ್ ನ ಪಾತ್ರದ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ಗ್ರೂಪ್ ನ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ಅವರು, ``ಇ-ಕಾಮರ್ಸ್ ಮಾರಾಟಗಾರರು ಮತ್ತು ಗ್ರಾಹಕರಿಗೆ ಸಮಾನವಾಗಿ ಮೌಲ್ಯ ಮತ್ತು ಪ್ರವೇಶವನ್ನು ಕಲ್ಪಿಸುವ ಒಂದು ಶಕ್ತಿಯುತವಾದ ಸಾಧನವಾಗಿದೆ. ನಮ್ಮ ಪೂರೈಕೆ ಜಾಲದ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಶಕ್ತಗೊಂಡ ಡಿಜಿಟಲ್ ಪರಿಸರ ವ್ಯವಸ್ಥೆಯು ಮಿಲಿಯನ್ ಗಟ್ಟಲೆ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡುವ ಮೂಲಕ ಹಲವಾರು ಸಾಧ್ಯತೆಗಳನ್ನು ಸಕ್ರಿಯಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಸಾಂಪ್ರದಾಯಿಕ ಗೋದಾಮುಗಳ ವಿಶ್ವಾಸಾರ್ಹತೆ ಹಾಗೂ ತಂತ್ರಜ್ಞಾನ ಸಕ್ರಿಯಗೊಳಿಸಿದ ರೂಪಾಂತರಗಳನ್ನು ನೀಡುತ್ತದೆ. ಈ ಮೂಲಕ ಲಕ್ಷಾಂತರ ಸ್ಥಳೀಯ ಮಾರಾಟಗಾರರು, ಎಂಎಸ್ಎಂಇಗಳು, ಕಿರಾಣಗಳು, ರೈತರಿಗೆ ನೆರವಾಗುತ್ತದೆ. ಇದಲ್ಲದೇ, ಹೆಚ್ಚು ಸೇವೆ ಲಭ್ಯತೆ ಇಲ್ಲದ ಸಮುದಾಯಗಳನ್ನು ರಾಷ್ಟ್ರೀಯ ಮಾರುಕಟ್ಟೆ ಜಾಲಕ್ಕೆ ಸಂಪರ್ಕ ಸಾಧಿಸುವಲ್ಲಿ ನೆರವಾಗುತ್ತದೆ. ಫ್ಲಿಪ್ ಕಾರ್ಟ್ ಭಾರತದಲ್ಲಿ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸುತ್ತಿದೆ. ಉದ್ಯಮ ಮತ್ತು ಆರ್ಥಿಕತೆಯನ್ನು ಚಾಲನೆ ಮಾಡುತ್ತದೆ ಹಾಗೂ ನಮ್ಮ ಮಾರಾಟಗಾರರು, ಕುಶಲಕರ್ಮಿಗಳು ಮತ್ತು ನೇಕಾರರಿಗೆ ದೇಶದ ದೂರದ ಭಾಗಗಳಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸಲು ಸಹಾಯ ಮಾಡುತ್ತದೆ. ಮೂಲಸೌಕರ್ಯ ಸೃಷ್ಟಿ, ಉದ್ಯೋಗ ಸೃಷ್ಟಿ ಮತ್ತು ಉದ್ಯಮಶೀಲತೆಯ ಪರಿಸರ ವ್ಯವಸ್ಥೆಯನ್ನು ಸೃಷ್ಟಿ ಮಾಡಲು ನಾವು ಮಹತ್ವದ ಪ್ರಭಾವ ಬೀರಲು ಬದ್ಧರಾಗಿದ್ದೇವೆ" ಎಂದು ತಿಳಿಸಿದರು.

ಹಬ್ಬದ ಸೀಸನ್ ನಲ್ಲಿ ದೇಶಾದ್ಯಂತದ ಲಕ್ಷಾಂತರ ಮಾರಾಟಗಾರರನ್ನು ಬೆಂಬಲಿಸುವ ನಿಟ್ಟಿನಲ್ಲಿ ಸರಕುಗಳ ತಡೆರಹಿತ ಚಲನೆಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಪೂರೈಕೆ ಜಾಲವನ್ನು ಮತ್ತಷ್ಟು ಶಕ್ತಿಯುತಗೊಳಿಸುವ ಅಗತ್ಯವಿದೆ. ಇದು ಅವರಿಗೆ ಅಸಾಧಾರಣವಾದ ಗ್ರಾಹಕ ಅನುಭವವನ್ನು ನೀಡಲು ಸಹಾಯ ಮಾಡುತ್ತದೆ. ಪೂರೈಕೆ ಜಾಲವನ್ನು ವಿಸ್ತರಣೆ ಮಾಡುವ ಫ್ಲಿಪ್ ಕಾರ್ಟ್ ನ ಪ್ರಯತ್ನವು ಒಂದು ಕಡೆ ಮಾರಾಟಗಾರರಿಗೆ ಸಹಾಯ ಮಾಡಿದರೆ, ಮತ್ತೊಂದು ಕಡೆ ದೇಶಾದ್ಯಂತ ಲಕ್ಷಾಂತರ ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತದೆ.

ಫ್ಲಿಪ್ ಕಾರ್ಟ್ ತನ್ನ ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗೆ ಲಸಿಕೆಗಳನ್ನು ಹಾಕಿಸುವ ಮೂಲಕ ಕೋವಿಡ್-19 ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ಇದರೊಂದಿಗೆ ತನ್ನ ಪೂರೈಕೆ ಜಾಲದಲ್ಲಿನ ಸಿಬ್ಬಂದಿಯ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡುತ್ತಿದೆ.

**2021 ರಲ್ಲಿ ಪ್ರಮುಖ ಪೂರೈಕೆ ಸರಪಳಿ ವಿಸ್ತರಣೆಯ ಯೋಜನೆ**

- ಗ್ರಾಹಕರಿಗೆ ತ್ವರಿತವಾಗಿ ವಿತರಣೆ ಮಾಡಲು ನೆರವಾಗಲು ಬ್ರ್ಯಾಂಡ್ ಪಾಲುದಾರರಿಂದ 100 ಕ್ಕೂ ಹೆಚ್ಚು ಸೌಲಭ್ಯಗಳ ಸೇರ್ಪಡೆ.
- 1,00,000 ಕ್ಕೂ ಅಧಿಕ ಕಿರಾಣ ಪಾಲುದಾರರ ಸೇರ್ಪಡೆಯೊಂದಿಗೆ ವಿತರಣಾ ಪಾಲುದಾರರ ಬಲವರ್ಧನೆ
- ದೇಶಾದ್ಯಂತ ವೇಗವಾಗಿ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ಅನೇಕ ಥರ್ಡ್-ಪಾರ್ಟಿ ಲಾಜಿಸ್ಟಿಕೆ ಪಾಲುದಾರರ ನೇಮಕ. ಇದರಿಂದ ಸಾಕಷ್ಟು ಪರೋಕ್ಷ ಉದ್ಯೋಗಗಳ ಸೃಷ್ಟಿ.
- ದೇಶಾದ್ಯಂತ ಜೀವ್ಸ್ ಮೂಲಕ 17,700 ಕ್ಕೂ ಹೆಚ್ಚು ಪಿನ್ ಕೋಡ್ ಗಳ ಗ್ರಾಹಕರಿಗೆ ಸೇವೆ. ಮೊಬೈಲ್, ದೊಡ್ಡ ಗೃಹೋಪಯೋಗಿ ಉತ್ಪನ್ನಗಳು, ಫರ್ನಿಚರ್ ಮತ್ತು ಐಟಿ ಉತ್ಪನ್ನಗಳಿಗೆ 8,000 ಕ್ಕೂ ಅಧಿಕ ತರಬೇತಿ ಹೊಂದಿದ ಸೇವಾ ತಂತ್ರಜ್ಞರ ನೇಮಕ.

ಕಳೆದ ಅನೇಕ ತಿಂಗಳುಗಳಲ್ಲಿ ಮಾರಾಟಗಾರರ ವ್ಯವಹಾರಗಳನ್ನು ಪುನಶ್ಚೇತನಗೊಳಿಸಲು ಮತ್ತು ಆರ್ಥಿಕ ಸ್ಥಿತಿಯನ್ನು ಮರಳಿ ಪಡೆಯಲು ಇ-ಕಾಮರ್ಸ್ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಗ್ರಾಹಕರಿಗೆ ಉತ್ಪನ್ನಗಳನ್ನು ಸುರಕ್ಷಿತ ಮತ್ತು ಸ್ಯಾನಿಟೈಸ್ ಮಾಡಿ ಪೂರೈಕೆ ಮಾಡುತ್ತಿದೆ. ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಮಾಡುವಲ್ಲಿ ಪ್ರಮುಖ ಪಾತ್ರ ನಿರ್ವಹಣೆ ಮಾಡುತ್ತಿದೆ. ಹಬ್ಬದ ಸೀಸನ್ ನಲ್ಲಿ ಫ್ಲಿಪ್ ಕಾರ್ಟ್ ಮತ್ತಷ್ಟು ಹೂಡಿಕೆಗಳನ್ನು ಮಾಡುತ್ತಿರುವ ಹಿನ್ನೆಲೆಯಲ್ಲಿ ಇಡೀ ಪರಿಸರ ವ್ಯವಸ್ಥೆಯಿಂದ ಹಲವಾರು ಪ್ರಯೋಜನಗಳು ಲಭ್ಯವಾಗಲಿವೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, Flipkart Wholesale, and Cleartrip. The Group is also a majority shareholder in PhonePe, one of the leading Payments Apps in India.

Started in 2007, Flipkart has enabled millions of consumers, sellers, merchants, and small businesses to be a part of India's digital commerce revolution, with a registered customer base of more than 350 million, offering over 150 million products across 80+ categories. Our efforts to democratize commerce in India, drive access and affordability, delight customers, create lakhs of jobs in the ecosystem, and empower generations of entrepreneurs and MSMEs have inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations have made online shopping more accessible and affordable for millions of Indians. Together with its group companies, Flipkart is committed to transforming commerce in India through technology.

For more information, please contact media@flipkart.com